158ನೇ ಮು.ಉ SL NO:- 66 ದಿ:- 17-03-26

**ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಶ್ರೀಮತಿ ಭಾರತಿ ಶೆಟ್ಟಿ ಇವರು**
**ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ಸೂಚನೆಗೆ ಉತ್ತರ**

**ವಿಷಯ:** ಸಂಯುಕ್ತ ಕರ್ನಾಟಕ ದಿನ ಪತ್ರಿಕೆಯಲ್ಲಿ ಪ್ರಕಟವಾಗಿರುವ ವರದಿಯನ್ನು ಉಲ್ಲೇಖಿಸುತ್ತೇನೆ.

ಜಾಲತಾಣದಿಂದ ಮಕ್ಕಳಲ್ಲಿ ಆತಂಕ, ಕೋಪ ಹೆಚ್ಚಳ!

ಅತಿಯಾದ ಸಾಮಾಜಿಕ ಜಾಲತಾಣದ ಬಳಕೆಯಿಂದಾಗಿ 9 ರಿಂದ 17 ವರ್ಷದ ಮಕ್ಕಳಲ್ಲಿ ಆತಂಕ, ನಿದ್ರೆ ಮತ್ತು ಕೋಪದ ಸಮಸ್ಯೆಗಳು ಹೆಚ್ಚುತ್ತಿವೆ ಎಂದು ಸಮೀಕ್ಷೆಯೊಂದರ ವರದಿಯಿಂದ ತಿಳಿದು ಬಂದಿದೆ.

ಲೋಕಲ್ ಸರ್ಕಲ್ಸ್ ನಡೆಸಿದ ಇತ್ತೀಚಿನ ಸಮೀಕ್ಷೆಯ ಪ್ರಕಾರ, ಬೆಂಗಳೂರಿನಲ್ಲಿ ಸಮೀಕ್ಷೆಗೆ ಒಳಗಾದವರಲ್ಲಿ ಶೇ.47ರಷ್ಟು ಜನರು ತಮ್ಮ ಕುಟುಂಬದಲ್ಲಿ 9 ರಿಂದ 17 ವರ್ಷ ವಯಸ್ಸಿನ ಮಕ್ಕಳು, ಕಳೆದ 12 ತಿಂಗಳುಗಳಲ್ಲಿ ಅನುಚಿತ ಮತ್ತು ವಯಸ್ಕ ವಿಷಯಗಳಿಗೆ ಒಡ್ಡಿಕೊಂಡಿದ್ದಾರೆ ಎಂಬುದು ಗೊತ್ತಾಗಿದೆ.

ಹೆಚ್ಚುವರಿಯಾಗಿ, ಶೇ.41ರಷ್ಟು ಜನರು ತಮ್ಮ ಕುಟುಂಬದ ಮಕ್ಕಳು ಕೃತಕ ಬುದ್ಧಿಮತ್ತೆ ಆಧಾರಿತ ಫೋಟೋ ಅಥವಾ ವಿಡಿಯೋ ಸೃಷ್ಟಿಸುವುದು ಮತ್ತು ಡೀಪ್ ಫೇಕ್ ದುರುಪಯೋಗದ ಅಪಾಯವನ್ನು ಎದುರಿಸಿದ್ದಾರೆ. ಬೆಂಗಳೂರಿನಿಂದ 11 ಸಾವಿರಕ್ಕೂ ಹೆಚ್ಚು ಪ್ರತಿಕ್ರಿಯೆಗಳನ್ನು ಹೊಂದಿರುವ ಸಮೀಕ್ಷೆಯು, ಶೇ.31ರಷ್ಟು ಮಕ್ಕಳು ಗೆಳೆಯರಿಂದಲೇ ಆನ್‌ಲೈನ್ ಬೆದರಿಸುವಿಕೆ ಅಥವಾ ಟ್ರೋಲಿಂಗ್ ಅನ್ನು ಎದುರಿಸಿದ್ದಾರೆ. ಶೇ.29 ರಷ್ಟು ಜನರು ಬ್ಲ್ಯಾಕ್ ಮೇಲ್ ಮತ್ತು ಬಲವಂತದ ಬೆದರಿಕೆಗಳನ್ನು ಎದುರಿಸಿದ್ದಾರೆ. ಶೇ.33 ರಷ್ಟು ಜನರು ಅಪರಿಚಿತರಿಂದ ಕಿರುಕುಳ ಅಥವಾ ನಿಂದನೀಯ ಸಂದೇಶಗಳನ್ನು ಸ್ವೀಕರಿಸಿದ್ದಾರೆ ಎಂದು ಸೂಚಿಸಿದೆ.

ಶೇ.21ರಷ್ಟು ಜನರು ವಿಶೇಷವಾಗಿ ಮಕ್ಕಳನ್ನು ಗುರಿಯಾಗಿಸಿಕೊಂಡು ಆನ್‌ಲೈನ್‌ವಂಚನೆ ಮಾಡುತ್ತಿದ್ದಾರೆ. ಸಮೀಕ್ಷೆಗೆ ಒಳಗಾದವರಲ್ಲಿ ಸುಮಾರು ಶೇ.41 ರಷ್ಟು ಜನರು ತಮ್ಮ ಕುಟುಂಬದ ಮಕ್ಕಳು ಅಹಿತಕರ ಆನ್‌ಲೈನ್ ಅನುಭವಗಳಿಂದಾಗಿ ಭಯ ಮತ್ತು ಆತಂಕವನ್ನು ಅನುಭವಿಸಿದ್ದಾರೆ ಎಂದು ಸೂಚಿಸಿದ್ದಾರೆ.

ಆದರೆ ಶೇ.59ರಷ್ಟು ಜನರು ನಿದ್ರೆಯ ಸಮಸ್ಯೆಗಳನ್ನು ಅಥವಾ ಕಡಿಮೆ ಏಕಾಗ್ರತೆಯನ್ನು ಅನುಭವಿಸಿದ್ದಾರೆ ಮತ್ತು ಶೇ.61ರಷ್ಟು ಜನರು ಕೋಪ ಅಥವಾ ಆಕ್ರಮಣಕಾರಿ ನಡವಳಿಕೆಯನ್ನು ಚಿತ್ರಿಸಿದ್ದಾರೆ ಎಂಬುದರ ಕುರಿತು.

**ಉತ್ತರ:** ಸಾಮಾಜಿಕ ಜಾಲತಾಣದ ಬಳಕೆಯಿಂದಾಗಿ ಮಕ್ಕಳ ಮೇಲೆ ಆಗುವ ದುಷ್ಪರಿಣಾಮಗಳನ್ನು ತಡೆಗಟ್ಟಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ :-

1. ಶಾಲಾ-ಕಾಲೇಜುಗಳಲ್ಲಿ ಆನ್‌ಲೈನ್ ಸುರಕ್ಷತೆ ಮತ್ತು ಸೈಬರ್ ಅಪರಾಧಗಳ ಬಗ್ಗೆ ಸೆಮಿನಾರ್‌ಗಳನ್ನು ಆಯೋಜಿಸಲಾಗಿದೆ.
2. ಪೋಷಕರಿಗಾಗಿ ಆನ್‌ಲೈನ್ ಸುರಕ್ಷತೆ ಮತ್ತು ಮಕ್ಕಳ ಮೇಲ್ವಿಚಾರಣೆಯ ಬಗ್ಗೆ ಕಾರ್ಯಾಗಾರಗಳನ್ನು ಆಯೋಜಿಸಲಾಗಿದೆ.

3. ಸೋಷಿಯಲ್ ಮೀಡಿಯಾ ವೇದಿಕೆಯಲ್ಲಿ ಆನ್‌ಲೈನ್ ಸುರಕ್ಷತೆಯ ಬಗ್ಗೆ ಅಭಿಯಾನಗಳನ್ನು ನಡೆಸಲಾಗುತ್ತಿದೆ.
4. ಪೊಲೀಸ್ ಅಧಿಕಾರಿಗಳು ಶಾಲಾ-ಕಾಲೇಜುಗಳಿಗೆ ಭೇಟಿ ನೀಡಿ ಮಕ್ಕಳಿಗೆ ಆನ್‌ಲೈನ್ ಸುರಕ್ಷತೆಯ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದೆ.
5. ಆನ್‌ಲೈನ್ ಸುರಕ್ಷತೆಯ ಬಗ್ಗೆ ಸ್ಪರ್ಧೆಗಳನ್ನು ಆಯೋಜಿಸಿ, ಮಕ್ಕಳಲ್ಲಿ ಅರಿವು ಮೂಡಿಸಲಾಗುತ್ತಿದೆ.
6. 'ಮೊಬೈಲ್ ಬಿಡಿ ಪುಸ್ತಕ ಹಿಡಿ' ಅಭಿಯಾನದಡಿ ಮಕ್ಕಳಲ್ಲಿ ಮೊಬೈಲ್ ಬಳಕೆಯನ್ನು ಕಡಿಮೆ ಮಾಡಿ ಓದುವ ಹವ್ಯಾಸ ಮತ್ತು ದೈಹಿಕ ಚಟುವಟಿಕೆಗಳನ್ನು ಉತ್ತೇಜಿಸಲು ಪ್ರಾರಂಭಿಸಲಾಗಿದೆ.
7. ಡಿಜಿಟಲ್ ನಾಗರಿಕ್ (Digital Nagarik): ಐಟಿ-ಬಿಟಿ ಇಲಾಖೆಯು ಮೆಟಾ (Meta) ಸಂಸ್ಥೆಯ ಸಹಯೋಗದೊಂದಿಗೆ ಶಿಕ್ಷಕರಿಗೆ ಡಿಜಿಟಲ್ ಸುರಕ್ಷತೆ ಮತ್ತು ಸೈಬರ್ ಸುರಕ್ಷತೆಯ ಬಗ್ಗೆ ತರಬೇತಿ ನೀಡುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.
8. ಪೋಷಕರಿಗೆ ಮತ್ತು ಶಿಕ್ಷಕರಿಗೆ ಸಲಹೆಗಳು :- ಪೋಷಕರು ಮಕ್ಕಳ ಮೊಬೈಲ್ ಬಳಕೆಯ ಮೇಲೆ ನಿಗಾ ಇಡಲು ಆಧಾರ್ ಆಧಾರಿತ ಮಾನಿಟರಿಂಗ್ ಆಪ್‌ಗಳನ್ನು ಬಳಸಲು ಉತ್ತೇಜಿಸಲಾಗುತ್ತಿದೆ.
9. ಮಹಿಳಾ ಮತ್ತು ಮಕ್ಕಳ ಸುರಕ್ಷತೆ ಸಂಬಂಧವಾಗಿ 112-ERSS ಕಾರ್ಯನಿರ್ವಹಿಸುತ್ತಿದ್ದು, ತ್ವರಿತ ನೆರವು ನೀಡಿ, ಕರೆಗಳಿಗೆ ಸ್ಪಂದಿಸಲಾಗುತ್ತಿದೆ.
10. ಮಕ್ಕಳ ಮೇಲಿನ ಅಪರಾಧಗಳ ತಡೆಗಟ್ಟುವ ಸಂಬಂಧ ಮಕ್ಕಳ ಸಹಾಯ ವಾಣಿಯು (1098) ನಿರಂತರವಾಗಿ ಕಾರ್ಯನಿರ್ವಹಿಸುತ್ತಿದೆ ಮತ್ತು ಪೊಲೀಸ್ ಇಲಾಖೆ, ಸಮಾಜ ಕಲ್ಯಾಣ ಇಲಾಖೆ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಹಯೋಗದಲ್ಲಿ ಸಭೆಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

ಬೆಂಗಳೂರಿನಲ್ಲಿ 2021-2025ರಲ್ಲಿ ದಾಖಲಾಗಿರುವ ಮಕ್ಕಳ ಮೇಲೆ ಆಗಿರುವ ಆನ್‌ಲೈನ್ ಅಪರಾಧಗಳ ಮಾಹಿತಿಯನ್ನು ಅನುಬಂಧದಲ್ಲಿ ಒದಗಿಸಿದೆ.

---

ಹೆಚ್‌ಡಿ 208 ಎಸ್‌ಎಸ್‌ಟಿ 2026

(ಡಾ: ಜಿ.ಪರಮೇಶ್ವರ)
ಗೃಹ ಸಚಿವರು.

## ಅನುಬಂಧ

| ONLINE CRIME AGAINST CHILDREN SINCE 2021-2025 | | | | | | |
|---|---|---|---|---|---|---|
| SL.NO. | Division | Year | POLICE STATION | CR.NO. & SEC OF LAW | D/O/REP | TYPE |
| 1 | West | 2021 | West CEN Crime PS | 43/2021 | 03-02-2021 | SEXUAL ABUSE MESSAGE |
| 2 | Central | 2021 | Central CEN Crime PS | 545/2021 | 25-10-2021 | ONLINE FRAUD (I-PHONE SALE) |
| 3 | South | 2021 | South CEN PS | 883/2021 U/s INFORMATION TECHNOLOGY ACT 2008 U/s: 67 (B) | 17-12-2021 | POSTING VICTIM PHOTOS MORPHING IN INSTAGRAM |
| 4 | East | 2022 | East CEN Crime PS | 0100/2022 | 25-02-2022 | ONLINE MONEY FRAUD |
| 5 | Whitefield | 2022 | Whitefield CEN Crime PS | 124/2022 | 26-02-2022 | SEXUAL ABUSE MESSAGE IN INSTAGRAM |
| 6 | West | 2022 | West CEN Crime PS | 499/2022 | 24-03-2022 | SENDING SEXUAL PHOTOS TO VICTIM |
| 7 | East | 2022 | East CEN Crime PS | 0202/2022 | 13-04-2022 | ONLINE MONEY FRAUD |
| 8 | Central | 2022 | Central CEN Crime PS | 426/2022 | 23-06-2022 | ONLINE MONEY FRAUD (PRODUCT SALE) |
| 9 | Central | 2022 | Central CEN Crime PS | 431/2022 | 25-06-2022 | ONLINE MONEY FRAUD |
| 10 | South | 2022 | South CEN PS | 658/2022 | 21-07-2022 | ONLINE MONEY FRAUD |
| 11 | North | 2022 | North CEN Crime PS | 896/2022 | 10-10-2022 | POSTING VICTIM PHOTOS MORPHING IN INSTAGRAM |
| 12 | South | 2022 | South CEN PS | 1160/2022 U/s INFORMATION TECHNOLOGY ACT 2008 U/s: 66 | 15-11-2022 | E-MAIL HACKING |
| 13 | Central | 2022 | Central CEN Crime PS | 864/2022 U/S NFORMATION TECHNOLOGY ACT 2008 (U/s-66(D)) | 22-11-2022 | ONLINE MONEY FRAUD |
| 14 | Whitefield | 2022 | Whitefield CEN Crime PS | 1010/2022 | 21-12-2022 | Job Fraud |
| 15 | NE | 2023 | YELAHANKA | 16/2023 U/S NFORMATION TECHNOLOGY ACT 2000 (U/s-66(E)); PROTECTION OF CHILDREN FROM SEXUAL OFFENCES ACT 2012 (U/s-12,11); IPC 1860 (U/s-384,354(D)) | 08-01-2023 | POCSO OTHERS |
| 16 | South | 2023 | South CEN PS | 1648/2023 | 14-02-2023 | ONLINE MONEY FRAUD |
| 17 | East | 2023 | East CEN PS | 257/2023 U/s 66(C) 66(D) It Act 2000 | 07-03-2023 | Online Job Fraud |
| 18 | NE | 2023 | YELAHANKA NEW TOWN | CR.NO. 136/2023 U/S INFORMATION TECHNOLOGY ACT 2000 (U/s-67(B)); PROTECTION OF CHILDREN FROM SEXUAL OFFENCES ACT 2012 (U/s-5(L),8); IPC 1860 (U/s-376(3)); PROTECTION OF CHILDREN FROM SEXUAL OFFENCES ACT 2012 (U/s-6); IPC 1860 (U/s-376(2)(n)) | 03-05-2023 | POCSO RAPE |
| 19 | East | 2023 | D.J. Halli PS | 127/2023 U/s POCSO 14 & IT act 67B | 06-06-2023 | pocso& IT act 67B |
| 20 | East | 2023 | East CEN PS | 709/2023 U/s 66(C), 66(D) It Act 2000 | 08-06-2023 | Social Media fraud |

| | | | | | | |
|---|---|---|---|---|---|---|
| 21 | NE | 2023 | VIDYARANYAPURA | CR.NO. 179/2023 | 23-07-2023 | MORPHING VICTIM PHOTO |
| 22 | NE | 2023 | Northeast CEN PS | 953/2023<br>IT ACT 2008 (U/s-66(E),67 (B)); PROTECTION OF CHILDREN FROM SEXUAL OFFENCES ACT 2012 (U/s-12,14) | 27-07-2023 | POSCO OTHERS |
| 23 | North | 2023 | North CEN Crime PS | 2195/2023 | 28-08-2023 | PART TIME JOB FRAUD |
| 24 | West | 2023 | Govindaraja Nagar PS | 361/2023 | 20-09-2023 | SEXUAL ABUSE MESSAGE IN WHATSUP |
| 25 | West | 2023 | Upparpet PS | 37/2023<br>U/s INFORMATION TECHNOLOGY ACT 2008 67(A) | 12-10-2023 | POSTING SEXUAL ABUSE MESSAGE IN INSTAGRAM |
| 26 | NE | 2024 | BAGALURU | CR.NO. 17/2024 U/S INFORMATION TECHNOLOGY ACT 2000 (U/s-67(B)); PROTECTION OF CHILDREN FROM SEXUAL OFFENCES ACT 2012 (U/s-5(l)); IPC 1860 (U/s-506), PROTECTION OF CHILDREN FROM SEXUAL OFFENCES ACT 2012 (U/s-4(2),6) | 22-01-2024 | POCSO RAPE |
| 27 | West | 2024 | Basaveshwara Nagar PS | 55/2024 U/S INFORMATION TECHNOLOGY ACT 2000 (U/s-66(C),66(D)) | 06-02-2024 | ONLINE MONEY TASK FRAUD |
| 28 | NE | 2024 | YELAHANKA | CR.NO. 70/2024 INFORMATION TECHNOLOGY ACT 2008 (U/s-67 (B)); PROTECTION OF CHILDREN FROM SEXUAL OFFENCES ACT 2012 (U/s-10,3(a),12,18,4(2)); IPC 1860 (U/s-504,506) | 15-02-2024 | POCSO RAPE |
| 29 | NE | 2024 | YELAHANKA | CR.NO. 69/2024 U/S INFORMATION TECHNOLOGY ACT 2000 (U/s-67(B)); PROTECTION OF CHILDREN FROM SEXUAL OFFENCES ACT 2012 (U/s-10); IPC 1860 (U/s-506); PROTECTION OF CHILDREN FROM SEXUAL OFFENCES ACT 2012 (U/s-12,4(2),18); IPC 1860 (U/s-504) | 15-02-2024 | POCSO RAPE |
| 30 | NE | 2024 | AMRUTHAHALLI | CR.NO. 106/2024 | 18-04-2024 | POSTING MORPHED VICTIM PHOTO ON SOCIAL MEDIA |
| 31 | NE | 2024 | Northeast CEN PS | 442/2024<br>IT ACT 2008 (U/s-66(E),67 (B)); PROTECTION OF CHILDREN FROM SEXUAL OFFENCES ACT 2012 (U/s-12,14 | 24-05-2024 | CREATING DEEP FAKE PHOTOS AND UPLOADING IN INSTAGRAM |
| 32 | E-City | 2024 | ParappanaAgragara PS | 281/2024<br>U/s 67, 67(b), 67(a) IT Act | 28-05-2024 | SEXUAL ABUSE MESSAGE ON URBAN PRO WEBSITE |

....3

| | | | | | | |
|---|---|---|---|---|---|---|
| 33 | East | 2024 | Bharathi Nagar PS | 96/2024 | 30-05-2024 | CREATING VICTIM MORPHED PHOTOS |
| 34 | SE | 2024 | Southeast CEN PS | 514/2024 u/s 67, 66(e) IT Act, 354(c), 384 IPC & 14, 15 POCSO Act. | 06-06-2024 | HARRASING FOR MONEY PRETENDING TO POST COMPLAINANT DAUGHTER VIDEOS ON SOCIAL MEDIA |
| 35 | East | 2024 | East CEN Crime PS | 511/2024 | 14-06-2024 | SEXUAL ABUSE |
| 36 | East | 2024 | East CEN Crime PS | 584/2024 | 11-07-2024 | POSTING SEXUAL ABUSE MESSAGE IN INSTAGRAM |
| 37 | East | 2024 | East CEN Crime PS | 582/2024 | 11-07-2024 | HARRASING CHILD THROUHG INSTAGRAM |
| 38 | East | 2024 | D.J. Halli PS | 348/2024 | 28-08-2024 | INSTAGRAM FAKE PROFILE CREATED |
| 39 | SE | 2024 | Southeast CEN PS | 850/2024 | 13-09-2024 | SEXUAL ABUSE MESSAGE IN INSTAGRAM |
| 40 | SE | 2025 | CC PS (SE) | 0369/2025 U/s 66(C) 66(D) IT Act & 318(4) 319(2) BNS Act | 10-04-2025 | Fake Customer Fraud |
| 41 | south | 2025 | hanumanthanagara | cr.no. 208/2025 u/s 66d IT act | 24-08-2025 | posting illegal message on instagram |
| 42 | Central | 2025 | High Grounds PS | 0193/2025 INFORMATION TECHNOLOGY ACT 2000 U/s: 66(D) | 06-09-2025 | Others |
| 43 | North | 2025 | Mahalakshmipuram PS | 0255/2025-ITACT 2008 U/s: 66(C),66(D) | 04-10-2025 | Online Money Transfer |
| 44 | West | 2025 | CHANDRA LAYOUT | 438/2025 U/S 66(C)66(D) IT Act | 30-10-2025 | Investment Fraud( Trading & Share Trading) |
| 45 | North | 2025 | Rajagoapalanagara | Cr no-411/2025 u/s INFORMATION TECHNOLOGY ACT 2000 U/s: 66(D),66(C) | 20-11-2025 | Online Money Transfer |

*****